ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1315
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್,
3. ಉತ್ತರಿಸುವ ದಿನಾಂಕ : 23-09-2021
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿ

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಲ್ಲಿ ಉಪನೋಂದಣಾಧಿಕಾರಿ ಕಛೇರಿಗಳ ಮೇಲೆ ಎಷ್ಟು ಬಾರಿ ಎಸಿಬಿ ದಾಳಿ ನಡೆಸಿದೆ: ಈ ಸಂದರ್ಭದಲ್ಲಿ ಎಷ್ಟು ಉಪನೋಂದಣಾಧಿಕಾರಿಗಳನ್ನು ಲಂಚ ಪಡೆದ ನೆಲೆಯಲ್ಲಿ ಬಂಧಿಸಲಾಗಿದೆ.	ಕಳೆದ 3 ವರ್ಷಗಳಲ್ಲಿ ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಉಪನೋಂದಣಾಧಿಕಾರಿ ಹಾಗೂ ಅವರ ಕಛೇರಿ ಮೇಲೆ ಶೋಧನೆ (Search) ಕುರಿತಂತೆ ಒಟ್ಟು 41 ಪ್ರಕರಣಗಳನ್ನು ದಾಖಲಿಸಿಕೊಂಡು ಶೋಧನೆ (Search) ಕೈಗೊಳ್ಳಲಾಗಿದೆ. ಇವುಗಳ ಪೈಕಿ ಲಂಚ ಪಡೆದ ಆರೋಪದ ಮೇಲೆ ಒಟ್ಟು 6 ಪ್ರಕರಣ ದಾಖಲಿಸಿಕೊಂಡು 6 ಜನ ಉಪ ನೋಂದಣಾಧಿಕಾರಿಗಳನ್ನು ಬಂಧಿಸಿ ಕ್ರಮ ಕೈಗೊಳ್ಳಲಾಗಿದೆ.
ಆ)	ಮಾಜಿ ಮುಖ್ಯಮಂತ್ರಿಗಳು ಉಪನೋಂದಣಾಧಿಕಾರಿ ಕಛೇರಿಗಳು ಭ್ರಷ್ಟಾಚಾರದ ನೆಲೆಗಳಾಗಿರುವ ಬಗ್ಗೆ ಪತ್ರ ಬರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ.	ಇಲ್ಲ
ಇ)	ಕಳೆದ 3 ವರ್ಷಗಳಲ್ಲಿ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಕಾರಣಕ್ಕಾಗಿ ಎಷ್ಟು ಉಪನೋಂದಣಾಧಿಕಾರಿಗಳ ಮೇಲೆ ಎಸಿಬಿ ದಾಳಿಗಳಾಗಿವೆ; ಸದರಿ ಉಪನೋಂದಣಾಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?	ಕಳೆದ 3 ವರ್ಷಗಳಲ್ಲಿ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಕಾರಣಕ್ಕಾಗಿ 01 ಉಪನೋಂದಣಾಧಿಕಾರಿ ಮೇಲೆ ದಾಳಿ(ಡಿ.ಎ) ಪ್ರಕರಣ ದಾಖಲಿಸಿಕೊಂಡು ದಾಳಿ ಮಾಡಲಾಗಿದೆ. ಸದರಿಯವರನ್ನು ಅಮಾನತ್ತು ಮತ್ತು ಲೀನ್ ಬದಲಾವಣೆಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ.

ಸಂಖ್ಯೆ: ಸಿಆಸುಇ 37 ಎಸಿಬಿ 2021 (ಇ-ಆಫೀಸ್)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ